ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು

ಅಭಿಯಾಚನೆ ಕ್ರಮಾಂಕ 32-ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಬಿಟ್ಟು)

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 23,24,25,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 15,83,55,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 33-ನಗರಾಭಿವೃದ್ಧಿ ಇತ್ಯಾದಿ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ರಾಜಸ್ವ ಖಾತೆಯಲ್ಲಿ 38,04,60,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 12,87,93,000 ರೂ.ಗಳಿಗಿಂತ ಮತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 34-ನಗರ ಪಾಲಿಕೆಗಳು ಮತ್ತು ಪಟ್ಟಣ ಪಂಚಾಯತಿಗಳಿಗೆ ಅನುದಾನ

ಶ್ರೀಯುತರೇ,

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1992ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರ ಪಾಲಿಕೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 75,60,15,000 ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು

ಪ್ರಕಟಣೆ

ಈ ದಿನ ಸೇರಿದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ 16ನೇ ಸೆಪ್ಟಂಬರ್ 1991 ರಿಂದು 27ನೇ ಸೆಪ್ಟಂಬರ್ 1991ರವರೆಗೆ ಈ ಕೆಳಕಂಡ ಕಾರ್ಯಕಲಾಪಗಳನ್ನು ನಡೆಸಬೇಕೆಂದು ತೀರ್ಮಾನಿಸಿದೆ.

ಸೋಮವಾರ	ಬೇಡಿಕೆಗಳ ಸಂಖ್ಯೆ 57,58,ರ ಮೇಲೆ
16-9-1991	ಚರ್ಚೆ ಹಾಗೂ ಮತಕ್ಕೆ ಹಾಕುವುದು
ಮಂಗಳವಾರ	ಬೇಡಿಕೆಗಳ ಸಂಖ್ಯೆ 23,30,26, ಮತ್ತು 59ರ
ಬುಧವಾರ	ಬೇಡಿಕೆಗಳ ಸಂಖ್ಯೆ 50,42,51,52,53,55
18-9-1991	ಮತ್ತು 56ರ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕವುದು

ಗುರುವಾರ	ಬೇಡಿಕೆಗಳ ಸಂಖ್ಯೆ 17,18,19,20,22,39
19-9-1991	40, 41, 43, ಮತ್ತು 21 ರ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು
ಶುಕ್ರವಾರ	ಇತರೆ ಬೇಡಿಕೆಗಳ ಸಂಖ್ಯೆ 25, 27, 28,11,
20-9-1991	12, 15, 16 37, 38, 1, 2, 3, 4, 44, 29, 14, 13, 24, 36, 35, 10, 6, 9, 8, 7, 60, 61, 31, ರ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು ಹಾಗೂ 1991-92ನೇ ಸಾಲಿನ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು
ಬುದುವಾರ ಗುರುವಾರ ಮತ್ತು ಶುಕ್ರವಾರ 25,26 ಮತ್ತು 27 ಸೆಪ್ಟಂಬರ್ 1991	ಶಾಸನ ರಚನೆ ಮತ್ತು ಇತರೆ ವಿಷಯಗಳು.

ದಿನಾಂಕ 11-9-1991 ರಂದು ಅದಿವೇಶನವಿರುವುದಿಲ್ಲ.

ದಿನಾಂಕ 16ನೇ ಸೆಪ್ಟೆಂಬರ್ ಸೇರುವುದು.

ಅಧಿವೇಶನವು ದಿನಾಂಕ 21ನೇ ಸೆಂಪ್ಟೆಂಬರ್ 1991ರಿಂದ ಮುಂದೂಡಿ ನಂತರ ಮತ್ತೆ 25ನೇ ಸೆಪ್ಟೆಂಬರ್ 1991 ರಂದು ಸೇರುವುದು.

26-8-1991 2 ಮತ್ತು 11ನೇ ಸೆಪ್ಟೆಂಬರ್ 91 ರಂದು ತೆಗೆದುಕೊಳ್ಳಬೇಕಾದ ಪ್ರಶ್ನೆಗಳ ಪಟ್ಟಿಯನ್ನು ಅನುಕ್ರಮವಾಗಿ 25,26,27ನೇ ಸೆಪ್ಟೆಂಬರ್ 91 ರಂದು ತೆಗೆದುಕೊಳ್ಳಲಾಗುವುದು.

ಮಂತ್ರಿಯವರಿಂದ ಹೇಳಿಕೆ

ಎಸ್.ಎಸ್.ಎಲ್.ಸಿ ಪರೀಕ್ಷಾ ಶುಲ್ಕದ ಏರಿಕೆ

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಎಸ್.ಎಸ್.ಎಲ್.ಸಿ ಪರೀಕ್ಷಾ ಶುಲ್ಕವನ್ನು ರೂ.40 ರಿಂದ 70 ಕ್ಕೆ ಏರಿಸಿ ಮಂಡಳಿಯ ನಿವ್ವಳ ಕೊರತೆಯನ್ನು ತುಂಬಲು ಏರಿಸಲಾಗಿತ್ತು. ಸರ್ಕಾರದ ದಿನಾಂಕ 14-8-91ರಂದು ಆದೇಶವನ್ನು ಹೊರಡಿಸಿತ್ತು ಆದರೆ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಅನೇಕ ಸದಸ್ಯರು ಈ ಶುಲ್ಕದ ಏರಿಕೆಯಿಂದ ಬಡ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುವುದೆಂದು ಸಭೆಯಲ್ಲಿ ಮಂಡಿಸಿ ಮತ್ತೊಮ್ಮೆ ಈ ಯೋಜನೆಯನ್ನು ಪರಿಶೀಲಿಸಿ ಶುಲ್ಕದ ದರವನ್ನು ಇಳಿಸಬೇಕೆಂದು ಕೋರಿದ್ದಾರೆ. ಸರ್ಕಾರ ಈ ಬಗ್ಗೆ ಈಗಾಗಲೇ ಪರಿಶೀಲಿಸಿ ಪರೀಕ್ಷಾ ಶುಲ್ಕವನ್ನು ರೂ 70 ರಿಂದ ರೂ 55 ಕ್ಕೆ ಇಳಿಸಲು ಮತ್ತು ಅರ್ಜಿ ಶುಲ್ಕವನ್ನು ರೂ 10 ರಿಂದ ರೂ 5 ಕ್ಕೆ ಇಳಿಸಲು ಪ್ರಸ್ತಾವನೆಯನ್ನು ಕಳುಹಿಸಲು ಈಗಾಗಲೇ ಸೂಚಿಸಿದೆ. ತತ್ಸಂಬಧ್ಧವಾಗಿ ಕೊರತೆಯನ್ನು ಸರ್ಕಾರವೇ ಭರಿಸುವುದಾಗಿ ತಿಳಿಸಿದ್ದೇನೆ. ಈ ಬಗ್ಗೆ ಈಗಾಗಲೇ ಆದೇಶ ಮತ್ತು ಪ್ರಕಟಣೆಯನ್ನು ಹೊರಡಿಸಲಾಗಿದೆ. ಒಟ್ಟಾರೆ 6,60,000 ಅಭ್ಯರ್ಥಿಗಳು ಇದ್ದು ಖರ್ಚು ಸುಮಾರು 4,79,305 ರೂ.ಗಳಿದ್ದು ಇದರಿಂದ ಮಂಡಳಿಗೆ ಕೊರತೆ 1,95,09,305 ರೂ ಗಳಾಗಿದೆ.